9.	ನೆಲಗಡಲೆ.		
	ಮುಂಗಾರು	68413943.38	12334167.78
10.	ನೆಲಗಡಲೆ		
	ಬೇಸಿಗೆ	5066965.14	1119707.14
11.	ಸೂರ್ಯಕಾಂತಿ		
	ಮುಂಗಾರು	2838985.11	12725902.96
	ಹಿಂಗಾರು	3397838.08	1027347.00
12.	ಗೋಧಿ ಹಿಂಗಾರು	157.96	2174.30
	ನೀರಾವರಿ	3880.20	-
	ಮಳೆ ಆಶ್ರಿತ	4988.61	-
13.	ಕಡಲೆ ಹಿಂಗಾರು	884460.20	28127.38
14.	ಕುಸುಮೆ ಹಿಂಗಾರು	389802.83	8399.22

ಹಾಸನ ವಿಧಾನ ಸಭಾ ಕ್ಷೇತ್ರಕ್ಕೆ ಕೃಷಿ ಕಾಲೇಜು ಮಂಜೂರು.

2525(3178)

ಶ್ರೀ ಕೆ.ಎಚ್.ಹನುಮೇಗೌಡ(ಹಾಸನ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ವಿಧಾನ ಸಭಾ ಕ್ಷೇತ್ರಕ್ಕೆ ಕೃಷಿ ಕಾಲೇಜನ್ನು ಎಂದು ಮಂಜೂರು ಮಾಡಲಾಗಿದೆ?

ಆ) ಈ ಕೃಷಿ ಕಾಲೇಜನ್ನು ಎಲ್ಲಿ ಪ್ರಾರಂಭಿಸಲಾಗುವುದು.

ಶ್ರೀ ವಿ.ಕೃಷ್ಣಪ್ಪ (ಕೃಷಿ ಮಂತ್ರಿಗಳು):

ಅ) 1996-97ನೇ ಶೈಕ್ಷಣಿಕ ವರ್ಷದಲ್ಲಿ ಮಂಜೂರು ಮಾಡಲಾಗಿದೆ.

ಆ) ಈ ವಿಷಯವು ಪರಿಶೀಲನೆಯಲ್ಲಿದೆ.

ದಕ್ಷಿಣ ಕನ್ನಡ ಜಿಲ್ಲೆಗೆ ಸೀಮಿತವಾಗಿ ಕುಮ್ಕಿ ಹಕ್ಕನ್ನು ಮಂಜೂರು ಮಾಡುವುದರ ಕುರಿತು.

2527(2868)

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ(ಕುಂದಾಪುರ): ಮಾನ್ಯ ಕಂದಾಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ ಸೀಮಿತವಾದಂತೆ ಕುಮ್ಕಿ ಹಕ್ಕು ಎಂದರೇನು; ಕುಮ್ಕಿ ಹಕ್ಕು ಮಂಜೂರು ಮಾಡುವ ಮಾನದಂಡ ಏನು; ಕುಮ್ಕಿ ಹಕ್ಕಿನ ಪರಿಮಿತಿ ಎಷ್ಟು.

ಆ) 1964ನೇ ಇಸವಿಯವರೆಗೆ ಕುಮ್ಕಿ ಹಕ್ಕನ್ನು ರೆಗ್ಯುಲರೈಸ್ ಮಾಡಿದ್ದು ಅನಂತರ ರೆಗ್ಯುಲರೈಸ್ ಮಾಡದಿರಲು ಕಾರಣವೇನು;

ಇ) ಕುಮ್ಕಿ ಹಕ್ಕು ರೆಗ್ಯುಲರೈಸ್ ಮಾಡುವುದು ನಿಲ್ಲಿಸಿರುವುದರಿಂದ ಗ್ರಾಮಸ್ಥರು ಅತಂತ್ರ ಸ್ಥಿತಿಯಲ್ಲಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ ಯಾವ ರೀತಿಯಲ್ಲಿ ಇತ್ಯರ್ಥಗೊಳಿಸಲಾಗುವುದು?

ಶ್ರೀಕಂಠಯ್ಯ.ಎಚ್.ಸಿ. (ಕಂದಾಯ ಸಚಿವರು):

ಅ) 1865ನೇ ಸಾಲಿನಲ್ಲಿ ಉಳುಮೆಮಾಡಲಾಗುತ್ತಿದ್ದ ಭೂಮಿಯನ್ನು 'ಕದೀಮ್' ಭೂಮಿ ಎಂಬುದಾಗಿ ಕರೆಯಲಾಗುತ್ತಿದೆ. ಕದೀಂ ಭೂಮಿಗೆ ಹೊಂದಿಕೊಂಡಂತೆ ಇದ್ದಂತಹ ಯಾವುದೇ ಸರ್ಕಾರಿ ಜಮಾನನ್ನು ಕುಮ್ಕಿ ಭೂಮಿ ಎನ್ನುತ್ತಾರೆ. ಕದೀಂ ಭೂಮಿಯ ಸೀಮಾರೇಖೆಯಿಂದ 450 ಲಿಂಕ್ಸ್; 100 ಮೀಟರ್‌ಗಳ ಅಂದರೆ ಕದೀಂ ಭೂಮಿಯ ಎರಡುಪಟ್ಟು ಮೀರದಂತೆ ಇರುವ ಭೂಮಿಯನ್ನು 'ಕುಮ್ಕಿ' ಭೂಮಿಯ ಪರಿಮಿತಿಯಾಗಿರುತ್ತದೆ. ಇಂತಹ ಭೂಮಿಯನ್ನು ಉರುವಲು ಮತ್ತು ದನಗಳ ಮೇವಿಗಾಗಿ ಉಪಯೋಗಿಸಬಹುದಾಗಿದೆ.

ಆ) ಕರ್ನಾಟಕ ಭೂ ಕಂದಾಯ ಕಾಯಿದೆ 1964ರಿಂದ ಜಾರಿಗೆ ಬಂದಿರುತ್ತದೆ. ಸದರಿ ಕಾಯಿದೆಯ ಸೆಕ್ಷನ್ 79(2)ರ ಕುಮ್ಕಿ ಹಕ್ಕನ್ನು ಮುಂದುವರಿಸಲು ಅವಕಾಶ ಕಲ್ಪಿಸಲಾಗಿದೆ. ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಅಧಿನಿಯಮ 94(ಬಿ) ಕುಮ್ಕಿ ಜಮಾನಿನಲ್ಲಿ ಸಾಗುವಳಿಯನ್ನು ಕ್ರಮಬದ್ಧಗೊಳಿಸಲು ಅವಕಾಶ